ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 1, March-April 2025, Pp. 21-24
Bi-Monthly, Peer-Reviewed, Open Access, Indexed Journal

**I S S N: 2583-3510**
**SIRDF JOURNALS**
editor@srujani.in
www.srujani.in

# ಪೊಲೀಸ್ ಶಾಸ್ತ್ರಿಯ ತನಿಖಾ ಪ್ರಸಂಗ ಒಂದು ವಿಶ್ಲೇಷಣೆ

**ಡಾ. ಶ್ರೀನಿವಾಸ. ಟಿ**
ಸಹಾಯಕ ಪ್ರಾಧ್ಯಾಪಕ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.

***Abstract:***

*ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ನಾಟಕಕ್ಕೆ ಮಹತ್ವದ ಸ್ಥಾನಮಾನವಿದೆ. ಆದಿ ಅಲಂಕಾರಿಕನಾದ ಭರತನು ತನ್ನ ಕೃತಿಯಾದ ನಾಟ್ಯಶಾಸ್ತ್ರದಲ್ಲಿ ನಾಟಕಗಳ ಲಕ್ಷಣ, ಗುಣ ಇತ್ಯಾದಿಗಳನ್ನು ವಿವರಿಸಿದ್ದಾನೆ. ನಾಟಕದ ಮಹತ್ವವನ್ನು ಅರಿತ ಷೇಕ್ಸ್‌ಪಿಯರ್ 'ಜಗವೆಲ್ಲ ನಾಟಕರಂಗ, ನಾವೆಲ್ಲ ಅದರ ಪಾತ್ರಧಾರಿಗಳು'. The whole world is a stage, all the men and women are merely the players; Shakesphere, 'As you like it.' ಎಂದಿದ್ದಾರೆ. ಕನ್ನಡದ ಪ್ರಥಮ ನಾಟಕ 'ಮಿತ್ರಾವಿಂದ ಗೋವಿಂದದಿಂದ' ಹಿಡಿದು ಇಂದಿನವರೆಗು ಕನ್ನಡ ಸಾಹಿತ್ಯದಲ್ಲಿ ಅನೇಕ ಉತ್ತಮ ನಾಟಕಗಳು ರಚನೆಗೊಂಡು ಸಾಹಿತ್ಯ ಕ್ಷೇತ್ರವನ್ನು ಸಮೃದ್ಧಗೊಳಿಸಿವೆ.ಪ್ರಸ್ತುತ ಈ ಲೇಖನದಲ್ಲಿ ಡಾ.ಪಿ.ಎಸ್.ರಾಮಾನುಜಂರವರು ರಚಿಸಿರುವ 'ಠಾಣೆಯಲ್ಲೊಂದು ಸೂತ್ರೋದಯ' ಎಂಬ ನಾಟಕದ ವಿಶ್ಲೇಷಣೆಯನ್ನು ಮಾಡಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ನಾಟಕ ಸಾಹಿತ್ಯ, ಠಾಣೆಯಲ್ಲೊಂದು ಸೂತ್ರೋದಯ, ಪಿ.ಎಸ್.ರಾಮಾನುಜಂ.*

**ಪೀಠಿಕೆ**

ಡಾ.ಪಿ.ಎಸ್.ರಾಮಾನುಜಂರವರು ವೃತ್ತಿಯಲ್ಲಿ ದಕ್ಷ ಪೊಲೀಸ್ ಅಧಿಕಾರಿಯಾಗಿದ್ದರೂ, ಪ್ರವೃತ್ತಿಯಲ್ಲಿ ಸಾಹಿತಿ. ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿ ಬಲವಾದ ಹಿಡಿತ ಹೊಂದಿದ್ದ ತ್ರಿಭಾಷಾಜ್ಞಾನಿಯಾಗಿದ್ದು ಸಾಹಿತ್ಯ ಸಂಸ್ಕೃತಿಯ ವಕ್ತಾರರಾಗಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ರಾಮಾನುಜಂ ಕಥೆ, ನಾಟಕ, ಪ್ರಬಂಧ, ಹನಿಗವನ ಮುಂತಾದ ಸೃಜನಶೀಲ ರಚನೆಗಳಲ್ಲದೆ, ಸೃಜನೇತರ ಪ್ರಾಕಾರಗಳನ್ನು ರಚಿಸಿ ವಿಮರ್ಶಾತ್ಮಕವಾದ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಕಾಳಿದಾಸನ 'ಕಾವ್ಯೇಷು ನಾಟಕಂ ರಮ್ಯಂ' ಎಂಬ ಧೋರಣೆಗೆ ಸಂವಾದಿಯಾಗಿ ನಾವು ರಾಮಾನುಜಂರವರ ನಾಟಕಗಳನ್ನು ಗಮನಿಸ ಬೇಕಾಗಿದೆ. 'ರಂಗ ನಾಟಕಗಳು ಕಣ್ಣಿನ ನಂಜನ್ನು ಕಳೆದು ಪವಿತ್ರಗೊಳಿಸಿದರೆ ಬಾನುಲಿ ನಾಟಕಗಳು ಕಿವಿಯ ಮಾಧ್ಯಮದಿಂದ ಶ್ರೋತೃವಿನ ಹೃದಯಕ್ಕೆ ಇಳಿಯ ಬೇಕಾಗುತ್ತದೆ, ಬಾನುಲಿ ರೂಪಕಗಳನ್ನು ಕಣ್ಣುಮುಚ್ಚಿ ಏಕಾಗ್ರತೆಯಿಂದ ಆಲಿಸಿದರೆ, ರಂಗ ನಾಟಕ ನೋಡುವಾಗ ಕಣ್ಣು ಹಾಗು ಕಿವಿ ಚುರುಕಾಗಿ ಕಾರ್ಯ ಮಾಡ ಬೇಕಾಗುತ್ತದೆ' ಎಂಬ ಬೇಂದ್ರೆಯವರ ಮಾತಿನಂತೆ ರಾಮಾನುಜಂ 'ಠಾಣೆಯಲ್ಲೊಂದು ಸೂತ್ರೋದಯ' ಎಂಬ ಈ ನಾಟಕವನ್ನು ಆಕಾಶವಾಣಿಯ ಗೆಳೆಯರಿಗಾಗಿ ರಚಿಸಿ ಕೊಟ್ಟರು. ಈ ನಾಟಕದ ಉದ್ದೇಶ ಅಧಿಕಾರಶಾಹಿಯ ದುರಂತವನ್ನು ಎತ್ತಿ ತೋರಿಸುವುದು. ಇದರಲ್ಲಿ

***Please cite this article as:*** ಶ್ರೀನಿವಾಸ. ಟಿ (2025). ಪೊಲೀಸ್ ಶಾಸ್ತ್ರಿಯ ತನಿಖಾ ಪ್ರಸಂಗ ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(1), 21–24

ಮುಖ್ಯವಾಗಿ ನಾವು ಪೊಲೀಸ್ ಮತ್ತು ಸಾರ್ವಜನಿಕರ ನಡುವಿನ ಸಂಬಂಧಗಳು ಮತ್ತು ಪೊಲೀಸರ ಬಯ್ಗುಳಗಳಿಂದ ಸಾಮಾನ್ಯ ಜನತೆಗೆ ಉಂಟಾಗುವ ಅಸಮಧಾನ ಮತ್ತು ಅದರಿಂದಾದ ಅವಮಾನದಿಂದ ಮೇಲಿನ ಅಧಿಕಾರಿಗಳಿಗೆ ಸಲ್ಲಿಸುವ ದೂರು, ತನಿಖೆ ಇತ್ಯಾದಿಗಳು ಪ್ರಮುಖವಾಗಿ ಗಮನ ಸೆಳೆಯುತ್ತವೆ.

ಈ ನಾಟಕದ ಕಥೆಯನ್ನು ಸಂಕ್ಷಿಪ್ತವಾಗಿ ಹೀಗೆ ವಿವರಿಸ ಬಹುದು. ಸಜ್ಜನಪುರ ಪೊಲೀಸ್ ಠಾಣೆಯ ಸಬಿನ್ಸ್‌ಪೆಕ್ಟರ್ ರಾಮಪ್ಪ ಅಪರಾಧವೊಂದರಲ್ಲಿ ಬಂಧಿಸಲಾಗಿದ್ದ ಮಹದೇವಪ್ಪನನ್ನು ಜಾಮೀನಿನ ಮೇಲೆ ಬಿಡಿಸಿ ಕೊಳ್ಳಲು ಬಂದಿದ್ದ ಅರ್ಜಿದಾರನಾದ ಗಿರಿಯಪ್ಪ ಎಂಬುವವರನ್ನು ಹೀನಾಮಾನವಾಗಿ ಬಯ್ದು ಅವಮಾನ ಮಾಡಿರುತ್ತಾರೆ. ಇದರಿಂದ ಕ್ರೋಧಗೊಂಡ ಅರ್ಜಿದಾರರು ಎಸ್.ಪಿ ಯವರಿಗೆ ದೂರು ನೀಡುತ್ತಾರೆ. ಆನಂತರ ವಿಚಾರಣೆ ಆರಂಭಿಸಿದ ಎಸ್.ಪಿ ರಾಮಪ್ಪನನ್ನು ಈ ವಿಷಯವಾಗಿ ಪ್ರಶ್ನಿಸುತ್ತಾರೆ. ಆದರೆ ಸಬ್‌ಇನ್ಸ್‌ಪೆಕ್ಟರ್ ಈ ಆಪಾದನೆಯನ್ನು ಅಲ್ಲಗಳೆಯುತ್ತಾರೆ ಮತ್ತು ತಾವು ಹೇಗೆ ವರ್ತಿಸಿದರೂ ಸಾರ್ವಜನಿಕರು ತಪ್ಪು ತಿಳಿಯುತ್ತಾರೆ. ನೋಡಿದರೆ ದುರುಗುಟ್ಟಿ ನೋಡಿದರು ಎನ್ನುತ್ತಾರೆ, ದುರುಗುಟ್ಟಿ ನೋಡಿದರೆ ಬಯ್ದರು ಎನ್ನುತ್ತಾರೆ. ಹೀಗಾದರೆ ನಾವು ಹೇಗೆ ಕರ್ತವ್ಯ ನಿರ್ವಹಿಸುವುದು! ಎಂದು ಎಸ್.ಪಿ ಯವರನ್ನೆ ಮರು ಪ್ರಶ್ನಿಸುವ ರಾಮಪ್ಪ ಸಲಹೆಯೊಂದನ್ನು ನೀಡುತ್ತಾರೆ, ಅದೆಂದರೆ ಬಹುಭಾಷಾ ಪಂಡಿತರಾದ ತಾವು ದೊಡ್ಡ ಮನಸ್ಸು ಮಾಡಿ ಪೊಲೀಸರಿಗಾಗಿ ಒಂದು ಹೊಸ ಭಾಷೆ ಕಂಡು ಹಿಡಿದು ಇಲಾಖೆಯನ್ನು ಉದ್ಧರಿಸ ಬೇಕು. ಅವರ ಪ್ರಕಾರ ಈ ಭಾಷೆಯಲ್ಲಿ ಬಯ್ದರೆ ಜನಗಳಿಗೆ ಬಯ್ದಂತಿರ ಬಾರದು. ಆದರೆ ಬಯ್ದ ಹಾಗೂ ಆಗಬೇಕು ಎಂಬುದಾಗಿರುತ್ತದೆ. ರಾಮಪ್ಪನವರ ಹೆಂಡತಿ ಬಹಳ ಘಾಟಿಯಾದ ಹೆಂಗಸಾಗಿದ್ದು ಪತಿಯನ್ನು ಅಸಡ್ಡೆಯಿಂದ ಕಾಣುತ್ತಿರುತ್ತಾಳೆ. ಠಾಣೆಯಲ್ಲಾದ ವಿಚಾರಣೆಯ ಕುರಿತು ಪತಿ ಪತ್ನಿಯರಿಬ್ಬರೂ ಸಂವಾದ ನಡೆಸುತ್ತಿದ್ದ ವೇಳೆಗೆ ಸರಿಯಾಗಿ ಅವಧಾನಿಗಳು ತಮ್ಮ ಮಗನ ಪೊಲೀಸ್ ಪೇದೆ ಕೆಲಸಕ್ಕೆ ರಾಮಪ್ಪನಿಂದ ಎಸ್.ಐ ರವರಿಗೆ ಶಿಫಾರಸ್ಸು ಮಾಡಿಸಲು ಮನೆಗೆ ಬರುತ್ತಾರೆ. ಬಂದು ಇವರ ಸಮಸ್ಯೆ ತಿಳಿದು ಕೊಂಡು ತಾವೇ ಅಂತಹ ಒಂದು ಭಾಷೆ ಕಲಿಸಿ ಕೊಡುವುದಾಗಿ ತಿಳಿಸುತ್ತಾರೆ. ಆದರೆ ರಾಮಪ್ಪ ಇದನ್ನೊಪ್ಪದೆ ತನ್ನ ಸಹೋದ್ಯೋಗಿಯಾದ ಕ್ರೈಂ ಸಬ್‌ಇನ್ಸ್‌ಪೆಕ್ಟರ್ ನಂಜಪ್ಪನಿಗೆ ಇದನ್ನು ಕಲಿಸುವಂತೆ ತಿಳಿಸುತ್ತಾರೆ.

ಒಂದೆರಡು ತಿಂಗಳ ನಂತರ ಮತ್ತೆ ಎಸ್.ಪಿ ಕಛೇರಿಯಲ್ಲಿ ನಂಜಪ್ಪನ ಮೇಲೆ ಆರೋಪ ಬಂದು ಅವನ ವಿಚಾರಣೆಯು ಆರಂಭವಾಗುತ್ತದೆ. ಅದರಲ್ಲಿಯು ಸಬ್‌ಇನ್ಸ್‌ಪೆಕ್ಟರ್ ಅರ್ಜಿದಾರನಾದ ಮಹದೇವಯ್ಯನನ್ನು ಹೀನಾಮಾನವಾಗಿ ಠಾಣೆಯಲ್ಲಿ ನಿಂದಿಸಿದರು ಎಂಬುದೇ ಆಗಿರುತ್ತದೆ. ಮತ್ತೆ ಯಥಾಪ್ರಕಾರ ಸಬ್‌ಇನ್ಸ್‌ಪೆಕ್ಟರ್ ಈ ಆಪಾದನೆಯನ್ನು ನಿರಾಕರಿಸಿ, ತಾವು ಆಡಿದಂತಹ ಮಾತುಗಳೆಲ್ಲವು ವ್ಯಾಕರಣ ಸೂತ್ರಗಳೇ ವಿನ: ಅವು ಬಯ್ಗುಳಗಳಲ್ಲ ಎಂದು ವಾದಿಸಿ, ತನ್ನ ಕಡೆಯ ಸಾಕ್ಷಿಯಾಗಿ ಅವಧಾನಿಗಳನ್ನು ಕರೆಸಿ ಅವರಿಂದ ಅವುಗಳಿಗೆ ವಿವರಣೆ ನೀಡಿಸುತ್ತಾರೆ. ಇದರಿಂದ ಕೇಸ್ ಮುಕ್ತಾಯವಾಗಿ ಅರ್ಜಿದಾರರು ತಮಗೂ ಆ ಭಾಷೆ ಕಲಿಸಿ ಕೊಡುವಂತೆ ಕೇಳುತ್ತಾರೆ. ಏಕೆಂದರೆ ಮುಂದೆ ಎಂದಾದರೂ ಠಾಣೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಆ ರೀತಿಯ ಭಾಷೆ ಪ್ರಯೋಗಿಸಿದರೆ ತಾವೂ ಸಹ ಅದೇ ಭಾಷೆ ಬಳಸ ಬಹುದು ಹಾಗು ತಮ್ಮ ಹೆಂಡತಿ ಘಟವಾಣಿಯಾದುದರಿಂದ ಅವಳ ಮೇಲೂ ಇದರ ಪ್ರಯೋಗ ಮಾಡಿ ಯಶಸ್ವಿಯಾಗ ಬಹುದೆಂಬ ಆಶಯ ಅವರದಾಗಿರುತ್ತದೆ.

ರಾಮಾನುಜಂರವರ 'ಠಾಣೆಯಲ್ಲೊಂದು ಸೂತ್ರೋದಯ' ಎಂಬ ಈ ಪ್ರಹಸನದಲ್ಲಿ ಸಮಾಜವನ್ನು ಸುಸ್ಥಿಯಲ್ಲಿಡ ಬೇಕಾದ ಪ್ರಮುಖ ಕರ್ತವ್ಯ ಪೊಲೀಸರದು. ಅಂತಹ ಪೊಲೀಸರು ಸಾರ್ವಜನಿಕರೊಡನೆ ಉತ್ತಮವಾದ ಸಂಬಂಧವಿರಿಸಿ

ಕೊಂಡು ಸಮಾಜದ ಸ್ವಾಸ್ಥ್ಯಕ್ಕಾಗಿ ಶ್ರಮಿಸ ಬೇಕು. ದುರದೃಷ್ಟವಶಾತ್ ಆದರಿಂದು ಸಾರ್ವಜನಿಕರು ಪೊಲೀಸ್ ಠಾಣೆಗಳಿಗೆ ಕಾಲಿಡಲು ಹೆದರುತ್ತಾರೆ. ಯಾವುದೇ ಆರಕ್ಷಕ ಠಾಣೆಗೆ ಹೋದರು ಅಲ್ಲಿನ ಸಿಬ್ಬಂದಿ ಸೌಜನ್ಯದಿಂದ ವರ್ತಿಸುವುದಿಲ್ಲ. ಒಂದು ರೀತಿಯ ಗಡಸುತನದಿಂದ ಅಧಿಕಾರ ಮದದಿಂದಲೇ ಸಾರ್ವಜನಿಕರೊಡನೆ ವ್ಯವಹರಿಸುತ್ತಾರೆ. ಮೊದಲೇ ಇವರನ್ನು ಕಂಡರೆ ಹೆದರುವ ಮಂದಿಗೆ ಅವರ ಇಂತಹ ಒರಟು ಭಾಷೆಯನ್ನು ಕೇಳಿ ಮತ್ತೂ ಹೆದರಿಕೆಯಾಗಿ ಠಾಣೆಗೆ ಬರುವುದನ್ನೇ ಬಿಟ್ಟು ಬಿಡುತ್ತಾರೆ. ಇಂತಹ ಪ್ರಸಂಗಗಳೆಲ್ಲವನ್ನು ಗಮನಿಸಿಯೇ ಸರ್ಕಾರ ಸಾರ್ವಜನಿಕರೊಡನೆ ಪೊಲೀಸರು ಸೌಹಾರ್ದಯುತವಾಗಿ ವರ್ತಿಸ ಬೇಕೆಂದು ಅನೇಕ ಸುತ್ತೋಲೆಗಳನ್ನು ಹೊರಡಿಸಿದೆ. ಆದರೂ ಇಲಾಖೆಯ ಸಿಬ್ಬಂದಿಗಳಾರೂ ಇವುಗಳಿಗೆ ಸೊಪ್ಪು ಹಾಕುವುದಿಲ್ಲ, ಅದಕ್ಕೆ ಪ್ರಹಸನದ ಸಬ್‌ಇನ್ಸ್‌ಪೆಕ್ಟರ್ ರಾಮಪ್ಪ ನೀಡುವ ಈ ಹೇಳಿಕೆಯನ್ನು ಗಮನಿಸ ಬಹುದಾಗಿದೆ.

'ಕ್ಷಮಿಸ ಬೇಕು ಸಾರ್ ತಮ್ಮ ಲೆವಲ್ನಲ್ಲಿ ಆ ರೀತಿ ಜನ, ಸಂದರ್ಭ ಬರೊಲ್ಲ, ಬಂದ್ರೂ ಕಡಿಮೆ. ನಮ್ಮ ಲೆವಲ್ನಲ್ಲಿ ಆ ರೀತಿ ಜನ ಬರ್ತಾರೆ, ನಿತ್ಯ ಬರ್ತಾನೆ ಇರ್ತಾರೆ, ಅವರ ಜೊತೆ ನಾವು ನಡ್ಕೊಳ್ಳಾಗ ಜೋರೂ ಮಾಡ್ಬೇಕಾಗುತ್ತೆ. ಉದಾಹರಣೆಗೆ ಹೇಳ್ತಿನಿ ಸಾರ್ 'ಯಾವನೋ ಒಬ್ಬ ಚಾಕೂ, ಚೂರಿ ಉಪಯೋಗಿಸುವ ರೌಡೀನ ಹಿಡ್ಕೊಂಡು ಬರ್ತೀವಿ ಅನ್ನಿ ಸಾರ್, ಅವನ್ನ ಪ್ಲೀಸ್ ಸಿಡೌನ್ ಸರ್ ಅಂತ ಕೂರ್ಸೋಕ್ಕಾಗಲ್ಲ ಸಾರ್, ತಮುಗೊತ್ತೇ ಇದೆ. ಅವನಿಗೆ ತಾವು ಚಿಕ್ಕಯ್ಯನಿಗೆ ಚೂರಿ ಹಾಕಿದ್ರಂತೆ ನಿಜವಾ? ದಯವಿಟ್ಟು ತಿಳಿಸಿ, ಬೇಜಾರ್ ಮಾಡ್ಕೊಬೇಡಿ ಹೀಗೆ ಕೇಳ್ದೆ ಅಂತ. ಹೀಗೆ ಕೇಳೋದ್ ಸರಿಯೆ?. ಜೊತೆಗೆ ಅವ್ನಿಗೆ 'ಏನೊ ಕೇಳ್ದೆ ಅಷ್ಟೆ, ತೊಂದ್ರೆ ಆಯ್ತೇನೊ ನಿಮಗೆ ಹಹ: ಬಾಯಾರಿಕೆಗೆ ನಿಮ್ಗೆ ಕಾಫಿ, ಟೀ, ಲಿಂಕಾ–ಅಥವಾ ಎಳ್‌ನೀರಾದ್ರು ಸ್ವಲ್ಪ ಅಂತ ಕೇಳುದ್ರೆ ಅವುನ್ನ ಬಗ್ಸೊಕ್ಕಾಗುತ್ಯೆ ತಾವೇ ಹೇಳಿ ಸಾರ್' ಎಂಬ ರಾಮಪ್ಪನ ಪ್ರಶ್ನೆಗೆ ಎಸ್.ಪಿ ಯವರು ನೀವು ಹೇಳುವುದು ಸರಿ ಎಲ್ಲರಿಗೂ ಒಂದೇ ಭಾಷೆ ಬಳಸುವುದಕ್ಕಾಗುವುದಿಲ್ಲ. ಆದ್ರೂ ಸಭ್ಯರಿಗೂ ದುಷ್ಟರಿಗೂ ವ್ಯತ್ಯಾಸ ಇದ್ಯಲ್ಲ. ನಾವು ಕೆಟ್ಟ ಭಾಷೆ ಬಳಸಿ ಬಿಟ್ರೆ ಜನ ಏನಂದ್ಕೊತಾರೆ: ಇಮೇಜ್ ಏನಾಗುತ್ತೆ. ಆದುದರಿಂದಲೇ ಪೊಲೀಸಿನವರ ಭಾಷೆ ಅಂದ್ರೇನೆ ಬಯ್ಗಳು ಎಂಬ ಅರ್ಥ ಬಂದು ಬಿಟ್ಟಿದೆ.

ಈ ಪ್ರಹಸನದಲ್ಲಿ ರಾಮಾನುಜಂ ಜನ ಸಾಮಾನ್ಯರ ನಾಗರೀಕ ಭಾಷೆಯನ್ನು ಸಮರ್ಥವಾಗಿ ಬಳಸಿ ಕೊಂಡು ನಾಟಕ ಪರಿಣಾಮಕಾರಿಯಾಗಿ ಮೂಡಿ ಬರುವಂತೆ ಅದನ್ನು ದುಡಿಸಿ ಕೊಂಡಿದ್ದಾರೆ. ಅದರಲ್ಲೂ ಪ್ರಮುಖವಾಗಿ ಎಸ್.ಪಿ ಮತ್ತು ರಾಮಪ್ಪನವರ ನಡುವೆ ನಡೆಯುವ ಸಂಭಾಷಣೆಗಳು ತುಂಬಾ ಸಹಜವಾಗಿ ಮೂಡಿ ಬಂದಿವೆ, ಹಾಗು ಶಾಮರಾವ್‌ರಂತಹ ಗುಮಾಸ್ತರು ಮಾಡುವ ತಪ್ಪುಗಳು ಸಹ ನಮ್ಮ ನಡುವಿನ ನಾಗರೀಕರು ಮಾಡುವಂತಹವುಗಳೇ ಆಗಿವೆ.

ಈ ಪ್ರಹಸನದ ಒಟ್ಟಾರೆ ಆಶಯವೆಂದರೆ ಸಾರ್ವಜನಿಕರು ಮತ್ತು ಪೊಲೀಸರ ನಡುವೆ ಉತ್ತಮ ಸೌಹಾರ್ದ ವಾತಾವರಣವಿರ ಬೇಕಾದರೆ, ಇಲಾಖೆಯವರು ಕೆಲವು ವೇಳೆ ವ್ಯಕ್ತಿಗಳನ್ನಾಧರಿಸಿ , ಸಮಯವನ್ನಾಧರಿಸಿ ವರ್ತಿಸಿ ಸಮಾಜದ ಶಿಕ್ಷಕರಾಗಿ ಕೆಲಸ ಮಾಡಬೇಕು ಎನ್ನುವುದೇ ಆಗಿದೆ. ಎಂಬ ಡಾ. ನಾ. ಮೊಗಸಾಲೆಯವರ ಅಭಿಪ್ರಾಯ ಪ್ರಹಸನಕ್ಕೆ ಹಿಡಿದ ಕೈಗನ್ನಡಿಯಂತಿದೆ.

'ಠಾಣೆಯಲ್ಲೊಂದು ಸೂತ್ರೋದಯ' ನಮ್ಮ ಬ್ಯೂರೋಕ್ರಸಿಯ ದುರಂತವನ್ನು ಎತ್ತಿ ತೋರಿಸುತ್ತದೆ. ಪ್ರಹಸನವು ಒಂದು ಅಸಂಗತ ಕಲ್ಪನೆ ಕೊಡ ಬಹುದೆಂಬ ಒಂದು ಹೊಸ ಆಯಾಮವನ್ನೇ ಇಲ್ಲಿ ಸೃಷ್ಟಿಸಲಾಗಿದೆ. ಮುಖ್ಯವಾಗಿ ಪೂರ್ಣ ಮುಜುಗರದ ತಂತ್ರ ಹೆಣೆದಿರುವ ವಿಡಂಬನೆಯು ಇದಾಗಿ ಯಶಸ್ವಿಯಾಗಿದೆ.

**ಪರಾಮರ್ಶನ ಗ್ರಂಥಗಳು:**


- ಬರಗೂರು ರಾಮಚಂದ್ರಪ್ಪ. *ವಿಮರ್ಶಾ ಸಂಕಲನ.*
- ಕೃಷ್ಣಶಾಸ್ತ್ರಿ ಎ.ಆರ್. (1937). *ಸಂಸ್ಕೃತ ನಾಟಕ.* ಮೈಸೂರು ವಿಶ್ವವಿದ್ಯಾನಿಲಯ.
- ರಾಮನುಜಂ, ಪಿ.ಎಸ್. *ಮೂರು ಪ್ರಹಸನಗಳು.*
- ವಾಮನ ಬೇಂದ್ರೆ. (ಸಂ.). *ಅಂಬಿಕಾತನಯದತ್ತರ ಸಮಗ್ರ ನಾಟಕ ಸಂಪುಟ*